ಶ್ರೀ ಪಿ. ಜಿ. ಆರ್. ಸಿಂಧ್ಯ.—ನೀವೇ ಈ ಕಡೆ ಕುಳಿತಿದ್ದಾಗ ಪ್ರಶ್ನೋತ್ತರ ವೇಳೆಯನ್ನು ಎರಡೂವರೆ ಗಂಟೆಗಳ ವರೆಗೆ ವಿಸ್ತರಣೆ ಮಾಡಿದ್ದೀರಿ. ಈಗ ನೋಡಿದರೆ ಈ ರೀತಿ ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಹೇಳಿದ್ದನ್ನು ನೀವು ಸರಿಯಾಗಿ ಆರ್ಥಮಾಡಿಕೊಳ್ಳಲಿಲ್ಲ ಎಂದು ಕಾಣಿಸುತ್ತದೆ ದಯವಿಟ್ಟು ಸ್ವಲ್ಪ ಯೋಚ್ನೆ ಮಾಡಿ ಆದರೆ ನಾನು ಹೇಳುತ್ತೇನೆ. ಕಾನೂನು ಪ್ರಕಾರ ಪ್ರಶ್ನೋತ್ತರ ವೇಳೆ ಇಡೀ ರಾಷ್ಟ್ರದ ಎಲ್ಲಾ ವಿಧಾನ ಸಭೆಗಳಲ್ಲೂ ಕೂಡ ಇರತಕ್ಕದ್ದು ೧ ಗಂಟೆ ಮಾತ್ರ. ಆದರೆ ಸಮಯವನ್ನು ನೋಡಿಕೊಂಡು ಅದನ್ನು ವಿಸ್ತರಿಸುವುದು ಮಾನ್ಯ ಸಭಾಧ್ಯಕ್ಷರ ವ್ಯಾಪ್ತಿಗೆ ಸೇರಿದ್ದಾದು ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ಅದನ್ನೇ ನಾನು ಹೇಳಿದ್ದಾದು ...

ಶ್ರೀ ಪಿ. ಜಿ. ಆರ್, ಸಿಂಧ್ಯ.—ಮಾನ್ಯ ಅಧ್ಯಕ್ಷರ ಪವರ್ಸ್‌ನ್ನು ಕರ್ಟೈಲ್ ಮಾಡುವುದಕ್ಕೆ ನಿವಂಗೂ ಸಾಧ್ಯವಿಲ್ಲ, ನಮಗೂ ಸಾಧ್ಯವಿಲ್ಲ, ಇಡೀ ರಾಷ್ಟ್ರದಲ್ಲಿ ಇದು ಒಂದು ಸಂಪ್ರದಾಯವಿದೆ ಎಂದು ಹೇಳಿದಿರಿ. ಆದರೆ ನೀವು ಹಿಂದೆ ಈಕಡೆ ಕುಳಿತಿದ್ದಾಗ ಪ್ರಶ್ನೋತ್ತರ ವೇಳೆಯನ್ನು ಎರಡೂವರೆ ಗಂಟೆಗಳ ಕಾಲ ಮಾಡಿಲ್ಲವೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿಂಧ್ಯರವರು ನನ್ನ ವಾತನ್ನು ಆರ್ಥ ಮಾಡಿಕೊಳ್ಳಲಿಲ್ಲ. ನಾನು ಹೇಳಿದ್ದು ಎಲ್ಲಾ ವಿಧಾನ ಸಭೆಗಳೆ.....

ಶ್ರೀ ವಾಟಾಳ್ ನಾಗರಾಜ್,—ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಪ್ರಶ್ನೆಗಳು ಹೋಗುತ್ತವೆ.....

ಶ್ರೀ ಎಂ. ವೀರಪ್ಪಮೊಯಿಲಿ.—ಈ ರಾಷ್ಟ್ರದ ಎಲ್ಲಾ ವಿಧಾನ ಸಭೆಗಳ ನಿಯಮಾವಳಿಗಳಲ್ಲೂ ಇರತಕ್ಕದ್ದು ಪ್ರಶ್ನೋತ್ತರ ವೇಳೆ ಒಂದು ಗಂಟೆ ಎಂದು. ಆದ್ದರಿಂದಲೇ ನಾನು ಆ ರೀತಿ ಹೇಳಿದ್ದಾದು.

ಮತ್ತೆ ಆ ಕಾಲಕ್ಕೆ, ಸಮಯಕ್ಕೆ ಸರಿಯಾಗಿ ಅದನ್ನು ವಿಸ್ತರಿಸತಕ್ಕಂಥದ್ದು ತಮಗೆ ಬಿಟ್ಟಿದ್ದಾದು. ಆದಕ್ಕೆ ನಾನು ಯಾವವಿಧವಾದ ಆಕ್ಷೇಪಣೆಯನ್ನು ಮಾಡುತ್ತಿಲ್ಲ. ಈ ವಿಧಾನ ಸಭೆಯ ನಡವಳಿಕೆಯಲ್ಲಿರತಕ್ಕಂಥದ್ದನ್ನು ಉಚ್ಚರಿಸಬೇಕಾದ್ದು ನಮ್ಮ ಕರ್ತವ್ಯ. ಅದನ್ನು ಹೇಳಿದನೇ ಹೊರತು ಅನ್ಯತಾ ಇಲ್ಲ.

ಪ್ರಕಟಣೆ

ಗೈರು ಹಾಜರಿಗೆ ಅನುಮತಿ ಕೋರಿಕೆ

ಅಧ್ಯಕ್ಷರು.—ಈ ಸದನದ ಸದಸ್ಯರಾದಂಥ ಶ್ರೀ ವೀರೇಂದ್ರ ಪಾಟೀಲ್‌ರವರು ಅವರ ಈಗಿನ ಆರೋಗ್ಯಸ್ಥಿತಿಯಿಂದಾಗಿ ದಿನಾಂಕ ೧೯–೧೧–೧೯೯೦ರ ಪ್ರಾರಂಭದಿಂದ ಅಧಿವೇಶನದ ಅಂತ್ಯದವರೆಗೆ ಹಾಜರಾಗಲು ಸಾಧ್ಯವಾಗುವುದಿಲ್ಲವೆಂದು ಪತ್ರ ಬರೆದಿರುತ್ತಾರೆ. ಶ್ರೀ ವೀರೇಂದ್ರ ಪಾಟೀಲ್‌ರವರು ಮೇಲೆ ಸೂಚಿಸಿದ ಅವಧಿಯವರೆಗೆ ಸದನಕ್ಕೆ ಗೈರುಹಾಜರಾಗಲು ಅನುಮತಿ ಕೊಡಬೇಕೆಂದು ಸದನವು ಆಪೇಕ್ಷಿಸುತ್ತಿದೆಯೇ ?

(ಯಾವ ಸದಸ್ಯರು ವಿರೋಧ ವ್ಯಕ್ತಪಡಿಸಲಿಲ್ಲ).

ಅಧ್ಯಕ್ಷರು.—ಶ್ರೀ ವೀರೇಂದ್ರ ಪಾಟೀಲ್‌ರವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

(ಶ್ರೀ ವೀರೇಂದ್ರ ಪಾಟೀಲ್‌ರವರಿಗೆ ಗೈರು ಹಾಜರಾಗಲಂ ಅನುಮತಿಯನ್ನು ನೀಡಲಾಯಿತು.)

ರಾಜ್ಯದಲ್ಲಿ ಪಿ.ಯು.ಸಿ. ಪ್ರಶ್ನೆಪತ್ರಿಕೆಗಳು ಪರೀಕ್ಷೆ ವಂನ್ನ ಹೊರಬಿದ್ದಿರುವುದು

† ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಪಿ.ಯು ಸಿ. ಪ್ರಶ್ನೆ ಪತ್ರಿಕೆಗಳು ಪ್ರಕಟವಾಗಿದೆ. ಇದರ ಮಧ್ಯೆ ತಮ್ಮ ಮನೆಗೆ ನಾನು ಬೆಳಿಗ್ಗೆ ೭–೫೦ರಲ್ಲಿ ಇವತ್ತು ಏನು ಸೆಕೆಂಡಿಯರ್ ಪಿ.ಯು ಸಿ. ಸಪ್ಲಿಮೆಂಟರಿ ಎಕ್ಸಾಮಿನೇಷನ್ ನಡೆಯುತ್ತಿದೆ, ಆದರ ಇಂಗ್ಲೀಷ್ ಪತ್ರಿಕೆಯ ಮೂಲ ಪ್ರತಿಯನ್ನು ಸಹ ನಾನು ಕಳುಹಿಸಿಕೊಟ್ಟಿದ್ದೇನೆ. ಏತಕ್ಕೆಂದರೆ ೯–೦೦ ಗಂಟೆಗೆ ಪರೀಕ್ಷೆಗಳು ಪ್ರಾರಂಭವಾಗುತ್ತಿರುವುದರಿಂದ ಅದಕ್ಕಿಂತ ಮುಂಚಿತವಾಗಿಯೇ ತಮಗೆ ಕಳುಹಿಸಿಕೊಡಬೇಕೆಂದು ಕಳುಹಿಸಿಕೊಟ್ಟಿದ್ದೇನೆ. ಈಗ ಪಿ.ಯು.ಸಿ. ಡೈರೆಕ್ಟರ್‌ರವರು ಕೊಟ್ಟಿದ್ದು ಮತಿಕ್ಕೆ

ನಾನು ತಮಗೆ ಕಳುಹಿಸಿಕೊಟ್ಟಿದ್ದನ್ನು ಕಂಪೇರ್ ಮಾಡಿದಾಗ ಇವತ್ತು ನಡೆಯುವಂಥ ಪಿ.ಯು.ಸಿ. ಇಂಗ್ಲೀಷ್ ಪತ್ರಿಕೆ ಏನು ಇದೆ ಅದು ಸಂಪೂರ್ಣವಾಗಿ ಅದೇ ದಾಖಲೆಗಳಾಗಿದ್ದು ಅದೇ ಕ್ವೆಶ್ಚನ್ಸ್ ೧೦೦ಕ್ಕೆ ೧೦೦ ಮಾರ್ಕ್ಸ್‌ದಾಗಿದ್ದು, ಮೂರು ದಿವಸಕ್ಕೆ ಮುಂಚೆ ಶಿವಮೊಗ್ಗ ಮತ್ತು ಬೇರೆ ಬೇರೆ ರಾಜ್ಯಗಳ ಉದ್ದಗಲಕ್ಕೂ ಪಾರಾಟ ವಾಗಿರುವುದು ಸತ್ಯಸಂಗತಿಯಾಗಿದೆ. ಅದರ ಪ್ರೂಫ್ ಅಂದರೆ ತಮಗೆ ಮುಂಚಿತವಾಗಿ ನಾನು ಕೊಟ್ಟಿರುವುದು ಮತ್ತು ಈಗ ಪಿ.ಯು.ಸಿ. ಎಜ್ಯುಕೇಷನ್, ಬೆಂಗಳೂರು ಅವರು ಕೊಟ್ಟಿರುವುದು ಒಂದೇ ಆಗಿದೆ. ನಿನ್ನೆದಿವಸ ಬಾಟ್ಲಿ ಎಕ್ಸಾಮಿನೇಷನ್‌ದು, ಫಿಸಿಕ್ಸ್ ಮಾರ್ಕ್ಸ್‌ನದು ಕ್ವೆಶ್ಚನ್ಸ್ ಶಿವಮೊಗ್ಗದಲ್ಲಿರತಕ್ಕಂಥ ಪೋಲೀಸ್ ಅಧಿಕಾರಿಗಳಿಗೆ ಮುಂಚಿತವಾಗಿಯೇ ಸಿಕ್ಕಿರುವುದನ್ನು ಕೊಟ್ಟು ಅವರಿಂದಲೂ ದಾಖಲೆಯನ್ನು ತೆಗೆದುಕೊಂಡಿಯತ್ತೇನೆ. ಮತ್ತು ನಾನು ರಾತ್ರಿ ೧೧-೦೦ ಗಂಟೆಗೆ ಶಿವಮೊಗ್ಗದ ಡಿ.ಡಿ.ಪಿ.ಐ.ರವರ ಕಛೇರಿಗೆ ಹೋಗಿ ಇವತ್ತು ಏನು ಪಿ.ಯು.ಸಿ. ಪತ್ರಿಕೆ ಬರುತ್ತಿದೆ ಆ ಪ್ರಶ್ನೆ ಪತ್ರಿಕೆಯ ನಕಲನ್ನು ಕೊಟ್ಟು ಅವರಿಂದಲೂ ಸಹ ದಾಖಲೆಯನ್ನು ತೆಗೆದುಕೊಂಡು ಬಂದಿರುತ್ತೇನೆ. ಇದು ಒಂದು ಭಾಗ. ಮತ್ತೊಂದು ಶಿವಮೊಗ್ಗದಲ್ಲಿ ಮಾತ್ರವಲ್ಲ. ಬೆಂಗಳೂರಿನಲ್ಲಿ ಮಾತ್ರವಲ್ಲ ಕೊಡಗು ಜಿಲ್ಲೆಯ ಮಡಕೇರಿಯಲ್ಲೂ ಸಹ ಈ ರೀತಿ ಪಿ.ಯು.ಸಿ. ಪ್ರಶ್ನೆ ಪತ್ರಿಕೆ ಬಯಲು, ಇಬ್ಬರ ಬಂಧನವೆಂದು ಹೇಳಿ ದೊಡ್ಡ ಶೀರ್ಷಿಕೆಯಲ್ಲಿ ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿದೆ. ಪ್ರಶ್ನೆಪತ್ರಿಕೆಯ ಬಂಡಲ್‌ಗಳನ್ನು ಬ್ಲೇಡಿನಿಂದ ಹರಿದು ಆ ಒಂದು ಒರಿಜಿನಲ್ ಪತ್ರಿಕೆಯನ್ನು ತೆಗೆದುಕೊಂಡು ಜರಾಕ್ಸ್ ಮಾಡಿ ಮಾರಾಟ ಮಾಡಿರುವಂಥದ್ದು ಮತ್ತು ಕೆ.ಆರ್. ಪೇಟೆಯಲ್ಲಿ ಜೂನಿಯರ್ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕ ಮುನ್ನಿರತ್ನಪ್ಪ. ಮತ್ತು ಹುಣಸೂರಿನ ಮಳೂರು ಗ್ರಾಮದ ಪ್ರಾಥಮಿಕ ಶಾಲೆಯ ಶಿಕ್ಷಕ ಸಿದ್ದರಂಗಯ್ಯ ಎಂಬುವರನ್ನು ಬಂಧನ ಮಾಡಿದ್ದಾರೆಂದು ಪ್ರಕಟವಾಗಿದೆ. ಮತ್ತೆ ಈಗಾಗಲೇ ಬಯಲಾಗಿರುವಂಥ ಪತ್ರಿಕೆ ಜೀವ ವಿಜ್ಞಾನ, ಸಸ್ಯಶಾಸ್ತ್ರವಲ್ಲದೆ ಇವತ್ತು ಇಂಗ್ಲೀಷ್ ಪತ್ರಿಕೆಯೂ ಸಹ ಬಯಲಾಗಿದೆ. ನಾನು ಹೇಳುವುದು, ಮಾನ್ಯ ಅಧ್ಯಕ್ಷರೇ ಅಧ್ಯಕ್ಷರೇ ದಯವಿಟ್ಟು ನಮ್ಮ ವಿದ್ಯಾರ್ಥಿಗಳು ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡತಕ್ಕಂಥ ಕಾಲ ಇದು. ಈ ರೀತಿ ಬಯಲಾದಂಥ ಪತ್ರಿಕೆಗಳಿಗೆ ಉತ್ತರಗಳನ್ನು ಬರೆದು ಅದರ ಆಧಾರದಮೇಲೆ ಇಂಜಿನೀಯರುಗಳು ಡಾಕ್ಟರುಗಳು ಆಗುವುದಾದರೆ ಪ್ರತಿಭಾವಂಥ ವಿದ್ಯಾರ್ಥಿಗಳು ಯಾರು ಹಗಲಂರಾತ್ರಿ ವಿದ್ಯಾಭ್ಯಾಸ ಮಾಡಿರುತ್ತಾರೆ ಅಂಥ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚಿಂತನೆ ಮಾಡತಕ್ಕಂಥ ಒಂದು ವಿಚಿತ್ರ ಪರಿಸ್ಥಿತಿಗೆ ನಾವು ಒಂದು ಮುಟ್ಟಿದ್ದೇವೆ. ಅದಕ್ಕೆ ಕ್ಕೆಸ್ಕರ ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳತಕ್ಕಂಥದ್ದು ಈಗಾಗಲೇ ಎಂಡುಮೂರು ವರ್ಷಗಳಿಂದ ಪ್ರಶ್ನೆ ಪತ್ರಿಗಳು ಇದೇ ರೀತಿ ಪ್ರಕಟವಾತ್ತಿದ್ದು ಇದಕ್ಕಾಗಿಯೇ ವ್ಯವಸ್ಥಿತವಾದ ಒಂದು ಜಾಲವಿದೆ. ಈರೀತಿ ಇರಬೇಕಾದರೆ ಸರ್ಕಾರ ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳದೆ ವಿದ್ಯಾರ್ಥಿಗಳು ಯುವಕರು ಚಿಂತನೆ ಮಾಡತಕ್ಕಂಥ ವಿಚಿತ್ರ ಪರಿಸ್ಥಿತಿ ಬಂದಿದೆ. ಅಲ್ಲದೆ ತಂದೆ ತಾಯಿಗಳೂ ಕೂಡ ಚಿಂತನೆ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಆದಕ್ಕೋಸರವಾಗಿ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು ಪಿ.ಯು.ಸಿ. ಪ್ರಶ್ನೆ ಪತ್ರಿಗಳು ಪ್ರಕಟವಾಗಿರತಕ್ಕಂಥ ಸಂದರ್ಭದಲ್ಲಿ ಪಿ.ಯು.ಸಿ. ಪರೀಕ್ಷೆಗಳನ್ನು ಮುಂದೂಡುತ್ತೀರಾ ? ಮುಂದೂಡಲು ಆಗಿರತಕ್ಕಂಥ ಕೆಟ್ಟ ಪರಿಣಾಮಕ್ಕೆ ಯಾರು ಜವಾಬ್ದಾರರು ? ಪತ್ರಿಕೆಗಳು ಈಗಾಗಲೇ ಪ್ರಕಟವಾಗಿರತಕ್ಕ ಸತ್ಯಾಂಶ ತಿಳಿದುಕೊಳ್ಳುವಂಥ ಪ್ರಯತ್ನ ಮಾಡಿದ್ದೀರಾ ? ತಮಗೆ ಅಧಿಕೃತವಾಗಿ ಬೇಕಾದ್ದೆ ೭-೫೦ರಲ್ಲಿ ಆ ಪತ್ರಿಕೆಯ ನಕಲನ್ನು ಕಳುಹಿಸಿದ್ದೇನೆ. ನಾನು ಈಗಾಗಲೇ ಹೇಳಿದಂತೆ ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿರುವುದನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಇದು ಎರಡೂ ಒಂದೇರೀತಿಯಲ್ಲದೆ. ಒಂದು ಕ್ವೆಶ್ಚನ್ ಕೂಡ ವ್ಯತ್ಯಾಸವಿಲ್ಲ. ಈರೀತಿ ಕಳೆದ ೩-೪ ವರ್ಷಗಳಿಂದ ಇಡೀ ರಾಜ್ಯದಲ್ಲಿ ಸೆಕೆಂಡರಿಯರ್ ಪಿ.ಯು.ಸಿ. ಸಪ್ಲಿಮೆಂಟರಿ ಎಕ್ಸಾಮಿನೇಷನ್ ಪ್ರಶ್ನೆ ಪತ್ರಿಕೆಗಳು ಪ್ರಕಟವಾಗುತ್ತಿರುವ ಸಂದರ್ಭದಲ್ಲಿ ಮತ್ತು ಪಾರಾಟವಾಗುತ್ತಿರುವ ಸಂದರ್ಭದಲ್ಲಿ ಯಾರೂ ಅಧಿಕಾರಿಗಳು ಈ ಜಾಲದಲ್ಲಿ ತೊಡಗಿ ಕೆಲಸ ಮಾಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಅದರ ಬಗ್ಗೆ ತೀವ್ರವಾಗಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಯಾರು ಜೇಜವಾಬ್ದಾರಿಯೂ ಅಧಿಕಾರಿಗಳಿದ್ದಾರೆ ಸಂಬಂಧಪಟ್ಟ ಮಂತ್ರಿಗಳಿದ್ದಾರೆ ಅವರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳದಿರತಕ್ಕಂಥ ಸಂದರ್ಭದಲ್ಲಿ ನಿಮ್ಮ ಸರ್ಕಾರವನ್ನು ರಾಜಿನಾಮೆ ಕೊಡಿ ಎಂದು ಕೇಳಬೇಕಾಗುತ್ತದೆ. ಅಲ್ಲದೆ ಸರ್ಕಾರ ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಶಕ್ತಿ ಇಲ್ಲವೆಂದು ಜನರಪರವಾಗಿ ನಾವು ಕೇಳುವಂಥ ಒಂದು ಸ್ಥಿತಿಗೆ ಬರಬೇಕಾಗುತ್ತದೆ. ಆದಕ್ಕೆ ತಾವು ಅವಕಾಶವನ್ನು ಮಾಡಿಕೊಡದೆ ಇವತ್ತಿನ ಪರಿಸ್ಥಿತಿಯ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಿಳಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

೧೨–೩೫ ಪಿ.ಎಂ.

ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಮತ್ತು ಮಂತ್ರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದರಲ್ಲಿ ಯಾರ ಕೈವಾಡ ಇದೆ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು.

†ಶ್ರೀ ಪಿ.ಜಿ.ಆರ್. ಸಿಂಧ್ಯ.—ಇವತ್ತಿನ ಪ್ರೀಯೂನಿವರ್ಸಿಟಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವುದು ಮಾನ್ಯ ಶಿಕ್ಷಣ ಮಂತ್ರಿಗಳ ಗಮನಕ್ಕೆ ಈಗಾಗಲೇ ಬಂದಿದೆ ಎಂದು ತಿಳಿದಿದ್ದೇನೆ. ಇಲ್ಲಿ ಮುಖ್ಯವಾಗಿರತಕ್ಕದ್ದು ಏನೆಂದರೆ ಹಿಂದಿನ ಶಿಕ್ಷಣ ಮಂತ್ರಿಗಳು ಇದ್ದಾಗ ಇದೇ ರೀತಿ ಪ್ರಶ್ನೆ ಪತ್ರಿಕೆ ಬಯಲಾದ ವಿಚಾರ ಬಂದಾಗ ಇನ್ನು ಮುಂದೆ ಇಂಥದ್ದಕ್ಕೆ ಅವಕಾಶ ಕೊಡುವುದಿಲ್ಲವೆಂದು ಭರವಸೆ ಕೊಟ್ಟಿದ್ದರು. ನಮ್ಮ ಸರ್ಕಾರ ಇದ್ದಾಗಲೂ ಈ ರೀತಿ ಆಗಿದೆ. ಪಿ.ಯು.ಸಿ. ಡೈರೆಕ್ಟರೇಟ್ ಮತ್ತು ಎಸ್.ಎಸ್.ಎಲ್.ಸಿ. ಬೋರ್ಡಿನಲ್ಲಿ ಕೆಲವು ಅಧಿಕಾರಿಗಳು ಇದಕ್ಕೋಸ್ಕರ ಪ್ರೋಸ್ಟ್ರಿಂಗ್ಸ್ ಮಾಡಿಸಿಕೊಂಡು ಹಣ ಮಾಡತಕ್ಕದ್ದು ಇದೆ. ವಿದ್ಯಾರ್ಥಿಗಳ ಭವಿಷ್ಯ ಅಡಕವಾಗಿರತಕ್ಕದ್ದು ಈ ಪಿ.ಯು.ಸಿ. ಪರೀಕ್ಷೆಯಲ್ಲಿ. ತಮಗೆ ಗೊತ್ತಿರುವ ಹಾಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಕ್ಯಾಪಿಟೇಷನ್ ಫೀ ಅನ್ನು ಕಾನೂನು ಪ್ರಕಾರ ರದ್ದು ಮಾಡಿದ್ದರೂ ಎಷ್ಟು ದೊಡ್ಡ ಪ್ರಮಾಣದಲ್ಲಿ ಹಣದ ಅವ್ಯವಹಾರ ನಡೆಯುತ್ತಿದೆ ಎಂಬುದು ಗೊತ್ತಿದೆ. ಆದುದರಿಂದ ಮಾನ್ಯ ಮಂತ್ರಿಗಳಲ್ಲಿ ಒತ್ತಾಯಿಸುವುದೇನೆಂದರೆ, ಈ ಜಾಲ ಏನಿದೆ ಇದನ್ನು ಸಂಪೂರ್ಣವಾಗಿ ಅಡಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಪರೀಕ್ಷೆಯನ್ನು ನಡೆಸುವುದು ಕಷ್ಟದ ಕೆಲಸ. ಈ ಸಂದರ್ಭದಲ್ಲಿ, ನನ್ನ ಒಂದು ಸಲಹೆ ಏನೆಂದರೆ, ಎಕ್ಸಾಮಿನೇಷನ್ ಸಿಸ್ಟಂ ಅನ್ನು ಬದಲಾವಣೆ ಮಾಡಿ ಓಪನ್ ಬುಕ್ ಎಕ್ಸಾಮಿನೇಷನ್ ಮಾಡುವುದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡ ಬಯಸುತ್ತೇನೆ.

ಶ್ರೀ ಪಾಟೀಳ್ ನಾಗರಾಜ್.—ಪ್ರಶ್ನೆ ಪತ್ರಿಕೆಗಳು ಬಯಲಾಗುವುದು ಪ್ರತಿ ವರ್ಷ ನಡೆಯುತ್ತಿದೆ ಇದರ ಬಗ್ಗೆ ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಲ್ಲಿಲ್ಲವೆಂದರೆ ಪ್ರತಿಭಾವಂತ ವಿದ್ಯಾರ್ಥಿಗಳಲ್ಲದೆ ಅನೇಕ ಜನ ಗಂಭೀರವಾದ ಪರಿಸ್ಥಿತಿಗೆ ಸಿಗುವ ಪರಿಸ್ಥಿತಿ ಉಂಟಾಗಿದೆ ಎಲ್ಲಾ ಕಾಲೇಜುಗಳ ಮುಂದೆ ಆಂಗಡಿಯಲ್ಲಿ ಇಟ್ಟುಕೊಂಡು ವಹಿವಾಟು ಮಾಡುವ ರೀತಿ ವ್ಯಾಪಾರ ನಡೆಯುತ್ತಿದೆ. ಒಂದೊಂದು ವಿಷಯದ ಪತ್ರಿಕೆಗೆ ಇಷ್ಟು ಹಣ ಎಂದು ವ್ಯಾಪಾರವಾಗುತ್ತಿದೆ. ಸರ್ಕಾರ ಈ ಬಗ್ಗೆ ತನಿಖೆ ಮಾಡತಕ್ಕದ್ದು ಸೂಕ್ತ. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಮುಂದೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜಿಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ತುಂಬಾ ಹಾನಿಯಾಗುತ್ತದೆ. ಬೇರೆ ವಿದ್ಯಾರ್ಥಿಗಳು ಬಂದು ನಂಬರ್ ಜಾಸ್ತಿ ಪಡೆದು ಪ್ರತಿಭಾವಂತರಿಗೆ ಅನ್ಯಾಯವಾಗತಕ್ಕದ್ದು ಆಗಿದೆ. ಇದನ್ನು ಗಂಭೀರವಾಗಿ ಪರಿಣಾಮಕಾರಿಯಾಗಿ ತೆಗೆದುಕೊಂಡು ಕೂಡಲೇ ತನಿಖೆಗೆ ಆಸ್ಪದ ಕೊಡಬೇಕು. ಬಯಲಾಗಿರತಕ್ಕ ಪತ್ರಿಕೆಗಳ ಪರೀಕ್ಷೆಯನ್ನು ತಡೆಹಿಡಿದು ಮುಂದಕ್ಕೆ ಹಾಕಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ (ವಿದ್ಯಾ ಸಚಿವರು).—ಮಾನ್ಯ ಅಧ್ಯಕ್ಷರೆ, ದಿನಾಂಕ ೧೯–೧೧–೧೯೯೦ರ ಸಂಜೆ ಮೈಸೂರು ವಿಭಾಗದ ಸಹ ನಿರ್ದೇಶಕರಿಂದ ಕೆಲವು ಮಾಹಿತಿಗಳನ್ನು ನಾನು ತೆಗೆದುಕೊಂಡಿದ್ದೇವೆ. ಅದೇ ರೀತಿ ಕೊಡದು ಜಿಲ್ಲೆಯ ಸಮೀಪದ ಪ್ರಾಥಮಿಕ ಶಾಲಾ ಶಿಕ್ಷಕರ ಬಳಿ ಪಿ.ಯು.ಸಿ. ಪರೀಕ್ಷೆಯ ಪತ್ರಿಕೆಗಳು ದೊರಕಿದ್ದು ವಿದ್ಯಾರ್ಥಿಗಳು ಪೊಲೀಸರಿಗೆ ದೂರು ನೀಡಲಾಗಿ ಆ ಪ್ರಾಥಮಿಕ ಶಿಕ್ಷಕರನ್ನು ಪೊಲೀಸರು ಪ್ರಶ್ನಿಸಿದ್ದಾರೆ. ಶಿಕ್ಷಕರ ಹೇಳಿಕೆಯಂತೆ ಕೆ. ಆರ್. ನಗರದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರ ಮೂಲಕ ಪತ್ರಿಕೆಗಳು ದೊರಕಿವೆ. ಪೊಲೀಸರು ಇದಕ್ಕೆ ಸಂಬಂಧಪಟ್ಟ ಉಪನ್ಯಾಸಕರನ್ನು ದಸ್ತಗಿರಿ ಮಾಡಲು ಅನುಮತಿಗಾಗಿ ಮೈಸೂರು ಸಹ ನಿರ್ದೇಶಕರನ್ನು ಕೇಳಿದ್ದಾರೆ. ೧೯–೧೧–೧೯೯೦ ರಂದು ಆಯುಕ್ತರು ಮೈಸೂರು ಸಹ ನಿರ್ದೇಶಕರಿಗೆ ದೂರವಾಣಿ ಮೂಲಕ ಮೇಲ್ನೋಟಕ್ಕೆ ಪ್ರಶ್ನೆ ಪತ್ರಿಕೆ ಬಯಲಾಗಿರುವುದಕ್ಕೆ ಇವರೇ ಕಾರಣರೆಂದು ಕಂಡು ಬಂದಿದೆ, ಆದ್ದರಿಂದ ಅವರನ್ನು ದಸ್ತಗಿರಿ ಮಾಡಲು ಅನುಮತಿಯನ್ನು ನೀಡಬಹುದೆಂದು ತಿಳಿಸಿದ್ದಾರೆ. ೧೯–೧೧–೧೯೯೦ರ ಸಂಜೆ ಸ್ಥಳೀಯ ಸರ್ಕಾರಿ ಕಾಲೇಜಿನ (ಬೆಂಗಳೂರು ನಗರದ ಹಿರಿಯ ಕಾಲೇಜಿನ) ಉಪನ್ಯಾಸಕರೊಬ್ಬರು ವಿದ್ಯಾರ್ಥಿ ಒಬ್ಬರಿಂದ ದೊರಕಿದ ಜೆರಾಕ್ಸ್ ಪ್ರತಿಯನ್ನು ಸ್ಥಳಿಸಿದ್ದು ಆದರಲ್ಲಿದ್ದ ಪ್ರಶ್ನೆಗಳು ೨೦–೧೧–೧೯೯೦ ರಂದು ನಡೆಯಬೇಕಾದ ಇಂಗ್ಲೀಷ್ ಪ್ರಶ್ನೆ ಪತ್ರಿಕೆಗೆ ಸಂಬಂಧಪಟ್ಟದ್ದಾಗಿರುತ್ತದೆ. ೨೦–೧೧–೧೯೯೦ರ ಬೆಳಿಗ್ಗೆ ೯–೩೦ಕ್ಕೆ ಅಧಿಕೃತ ಪ್ರಶ್ನೆ ಪತ್ರಿಕೆಗಳ ಕಟ್ಟನ್ನು ಬಿಚ್ಚಿದ ನಂತರ ಹೋಲಿಸಿ ನೋಡಿದಾಗ ಸಾಮ್ಯ ಕಂಡುಬಂದಿರುತ್ತದೆ. ಆ ಬಗ್ಗೆ ಅವರು ಪೊಲೀಸ್ ಕಮಿಷನರಿಗೆ ಅಧಿಕೃತವಾಗಿ ದೂರು ನೀಡಿದ್ದಾರೆ. ಆ ಬಗ್ಗೆ ವಿಚಾರಣೆ ನಡೆಯುತ್ತಿದೆ.

ಈ ಘಟನೆಯು ವ್ಯವಹಾರದಲ್ಲಿ ಸಂಬಂಧಪಟ್ಟವರು ಯಾರ್ಯಾರು ಪಾಲ್ಗೊಂಡಿದ್ದಾರೆ. ಅವರನ್ನು ದಸ್ತಗಿರಿ ಮಾಡಲು ಪೊಲೀಸರನ್ನು ಕೋರಿ ಕೂಡಲೇ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ. ಅದರ ಬಗ್ಗೆ ಪೂರ್ಣ ವಿಚಾರಣೆಯನ್ನು ಈಗಾಗಲೇ ಕೈಗೊಂಡಿದ್ದು ಎಲ್ಲಾ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಇನ್ನು ಶವಪೊಗ್ಗದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅದರ ವರದಿಯನ್ನು ತರಿಸತ್ತೇನೆ. ವರದಿ ತರಲಿಕ್ಕೆ ಆದೇಶ ಕೊಟ್ಟಿದ್ದೇನೆ. ಈಗ ಇದರಲ್ಲಿ ಒಂದೆರಡು ವಿಭಾಗ ಇರುತ್ತದೆ ಒಂದು ಅಧ್ಯಕ್ಷರೆ, ಈ ಪ್ರಶ್ನೆಗಳು ಏನಾಗಿದೆ ಎಂದು ಹೇಳಿದರೆ ಕೆಲವು ಪರೀಕ್ಷೆಗಳು, , ಈ ವರ್ಷದ್ದು ಹೇಳಿಲ್ಲವದು, ಹಿಂದಿನ ವರ್ಷದ್ದಲ್ಲ. ಈ ವರ್ಷದ ಪರೀಕ್ಷೆಗಳು ನಿಗದಿತ ಸಮಯದಲ್ಲಿ ಆಗಲಿಲ್ಲ. ಆದರೆ ಪ್ರಶ್ನೆ ಪತ್ರಿಕೆ ಆಯಾ ಟ್ರೆಜರಿ ಆಫೀಸಿಗೆ ಬಹಳ ಸಮಯದ ಹಿಂದೆಯೇ ಹೋಗಿದೆ. ಟ್ರೆಜರಿ ಆಫೀಸಿನವರು ಪರೀಕ್ಷೆ ನಡೆಯುವ ದಿವಸ ಬೆಳಗ್ಗೆ ಅದನ್ನು ಡೆಲಿವರಿ ಮಾಡಬೇಕು. ಸಮಯಕ್ಕೆ ಮೇಲ್ನೋಟಕ್ಕೆ ಏನು ಕಾಣುತ್ತಿದೆ ಎಂದರೆ ಪೆಚ್ಚಾಗಿ ಬರೀ ಉಪನ್ಯಾಸಕರು ಅಥವಾ ಸಂಬಂಧಪಟ್ಟವರು ಮಾತ್ರ ಕದಿಯುವುದಲ್ಲ, ಇದಕ್ಕೆ ಟ್ರೆಜರಿ ಆಫೀಸಿನವರು ಕೂಡ ಶಾಮಿಲಾಗಿದ್ದಾರೆಂದು ನಮಗೆ ಕಂಡು ಬರುತ್ತದೆ. ನಾನು ಹೇಳಿದ್ದೇನೆ ಅಲ್ಲಿ ಹಿಡುಕಿದಾಗ ಉಪನ್ಯಾಸಕರು ಮಾತ್ರವಲ್ಲ ಬೇರೆಯವರೂ ಶಾಮಿಲಾಗಿದ್ದಾರೆ. ಸಂಬಂಧಪಟ್ಟ ಟ್ರೆಜರಿ ಆಫೀಸರ್ ಕೂಡ ಇದರಲ್ಲಿ ಶಾಮಿಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ. ಡೈರೆಕ್ಟ್ ಇಂಟರ್‌ವೆನ್ಷನ್ ಇರಬಹುದು ಏನಾದರೂ ಇರಬಹುದು, ಅವರನ್ನೂ ಕೂಡ ನಾವು ದಸ್ತಗಿರಿ ಮಾಡಬೇಕಾಗುತ್ತದೆ. ಅವರ ಮೇಲೆ ಕೂಡ ನಾವು ಕೇಸನ್ನು ಹಾಕಬೇಕು. ಇದೇ ಆದೇಶ ಎಲ್ಲಾ ಟ್ರೆಜರಿ ಅಧಿಕಾರಿಗಳಿಗೆ ಕೂಡ ಕಳುಹಿಸಿ ಎಲ್ಲೆಲ್ಲಿ ಲೀಕ್ ಔಟ್ ಆಗಿರುವ ಪ್ರಸಂಗ ಇದೆ. ಅಲ್ಲಿ we will invariably arrest the respective Treasury Officers. ಸಂಬಂಧಪಟ್ಟವರು ಯಾರು ಸಿಗುತ್ತಾರೆ ಅವರನ್ನು ಹಿಡಿಯಬೇಕೆಂ ಎಂದು ಕೂಡ ನಾವು ಆದೇಶ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರತಕ್ಕದ್ದು. ಇದು ಗಮನಕ್ಕೆ ಬಂದ ತಕ್ಷಣ ಸಂಬಂಧಪಟ್ಟ ಟ್ರೆಜರಿ ಆಫೀಸರ್ ಇರಬಹುದು ಉಪಾಧ್ಯಾಯರಿರಬಹುದು, ಯಾರೇ ಇರಬಹುದು ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳುತ್ತೀರಿ. ಅರೆಸ್ಟ್ ಮಾಡುತ್ತೀರಿ ಅದು ಸರಿ. ಆದರೆ ನಾನು ತಮ್ಮಿಂದ ಉತ್ತರ ಬಯಸುವುದು ನಿನ್ನೆ ಮತ್ತು ಇವೊತ್ತು ಬಾಟಿ ಮತ್ತು ಇಂಗ್ಲೀಷ್ ಕ್ವೆಶ್ಚನ್ ಪೇಪರ್ ಅದೇ ಆಗಿರುವುದರಿಂದ ವಿಕ್ಕೆಳ ಮುಂದಿನ ಭವಿಷ್ಯದ ಪ್ರಶ್ನೆ ಏನು ? ಪರೀಕ್ಷೆಗಳನ್ನು ಮುಂದೂಡುತ್ತೀರಾ ? ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ? ಬೇಕಾದರೆ ನಾನು ಈ ಎರಡು ಪ್ರಶ್ನೆಪತ್ರಿಕೆಗಳನ್ನು ಕಳುಹಿಸುತ್ತೇನೆ. ಕ್ವೆಶ್ಚನ್ ವಾರ್ಕ್ ಫೂಲ್‌ಸ್ಟಾಪ್, ಕಾಮಾ ಏನೂ ಕೂಡ ವ್ಯತ್ಯಾಸ ಇಲ್ಲ. ೧೦೦ಕ್ಕೆ ೧೦೦ ಹಾಗೆಯೇ ಹಾಗೆಯೇ ಇದೆ. ಇಂಗ್ಲೀಷ್ ಪತ್ರಿಕೆಗಳು ರಸ್ತೆಯಲ್ಲಿ ಮಾರಾಟವಾಗಿವೆ. ಈ ಸಮಯದಲ್ಲಿ ಪ್ರಾಮಾಣಿಕ ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಬಗ್ಗೆ ಸರ್ಕಾರದ ನಿಲುವೇನು ? ಅಥವಾ ಪರೀಕ್ಷೆಗಳನ್ನು ಮುಂದೂಡುತ್ತೀರಾ ? ಈ ರೀತಿ ಆಗದಂತೆ ಭರವಸೆ ಕೊಟ್ಟು ಸರಿಯಾದ ವ್ಯವಸ್ಥೆ ಮಾಡುತ್ತೀರಾ ? ಕಳೆದ ಎರಡು ವರ್ಷಗಳಿಂದ ಇದು ಸತತವಾಗಿ ನಡೆಯುತ್ತಿದೆ. ಸರ್ಕಾರ ಯಾವ ಬಿಗಿ ನಿಲುವು ತೆಗೆದುಕೊಂಡಿದೆ ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಇವತ್ತು ಯಾವನೋ ಒಬ್ಬನನ್ನು ದಸ್ತಗಿರಿ ಮಾಡುವುದರಿಂದ ಸಾವಿರಾರು ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಸರಿಹೋಗುವುದಿಲ್ಲ. ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಜಿಲ್ಲಾವಾರು ಮಾಡಿದಂತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಿಮ್ಮಿಂದನು ರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಪ್ರಥಮ ಭಾಗ ಮಾತ್ರ ಹೇಳಿದೆ. ಎರಡನೆಯ ಭಾಗಕ್ಕೆ ಬರಲೀ ಇಲ್ಲ. ಒಂದು ಭಾಗ, ಸ್ಥಳೀಯವಾಗಿ ಲೀಕ್ ಔಟ್ ಆಗುವ ಸಂಭವ ಇದೆ. ಅದಕ್ಕೆ ಟ್ರೆಜರಿ ಆಫೀಸರ್ ಮೇಲೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಇಲ್ಲಿ ಅಂದರೆ ಡೈರೆಕ್ಟ್ ರೇಟ್ ಲೆವೆಲ್‌ನಲ್ಲಿ ಜಾಲ ಇದ್ದರೆ ಅದನ್ನು ಬಿಡುವುದಿಲ್ಲ ಅಲ್ಲಿಯೇ ಹತ್ತಿಕ್ಕುತ್ತೇವೆ ಮತ್ತು ಬೇಕಾದಂಥ ಕ್ರಮ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಯಾವ ರೀತಿಯಲ್ಲಿ ಈ ಪಿಡುಗನ್ನು ಮೂಲೋತ್ಪಾಟನೆ ಮಾಡಬೇಕೋ ಅಂಥ ಕ್ರಮವನ್ನು ಮಾಡತಕ್ಕಂಥ ಕಾರ್ಯಕ್ರಮ ನಾವು ಖಂಡಿತ ಮಾಡುತ್ತೇವೆ. ಅದು ಯಾರೇ ಇರಲಿ. ಸನ್ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೆ ಪತ್ರಿಕೆ ಎರಡೂ ಕಡೆಗಳಲ್ಲಿ ಬಹಿರಂಗವಾಗಿದೆ ಎಂದು ನಮಗೂ ಕೂಡ ಮೇಲ್ನೋಟಕ್ಕೆ ಕಂಡುಬಂದಿದೆ. ಏಕೆಂದರೆ ಎರಡಕ್ಕೂ ಸಾಮ್ಯತೆ ಇದೆ ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತದೆ. ಅಂಥ ಪ್ರಸಂಗದಲ್ಲಿ ಪರೀಕ್ಷೆಯನ್ನು ಮುಂದೂಡುವ ಕಾರ್ಯಕ್ರಮ ಕೂಡ ನಾವು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಕೆ.ಎಚ್. ರಂಗನಾಥ್ ಅವರು ವಿದ್ಯಾಮಂತ್ರಿಗಳಾಗಿದ್ದಾಗ ಈ ಬಗ್ಗೆ ಒಂದು ಕಾನೂನನ್ನೇ ತರುವ ಆಲೋಚನೆ ಅವರಿಗಿತ್ತು. ಈರೀತಿ ಆದಾಗ ಏನು ಮಾಡಬೇಕು ? ಅದನ್ನು ತಪ್ಪಿಸಬೇಕಾದರೆ ಯಾವರೀತಿ ಮಾಡಬೇಕು ಎಂಬ ಆಲೋಚನೆ ಇತ್ತು. ಮಾನ್ಯ ಮಂತ್ರಿಗಳ ಉತ್ತರದಲ್ಲಿ ಆ ಆಲೋಚನೆ ಬಗ್ಗೆ ಏನೂ ಹೇಳಿಲ್ಲ.

ಅಧ್ಯಕ್ಷರು.—ಕಾನೂನು ಮಾಡಿದರೆ ಇದನ್ನು ತಪ್ಪಿಸಿಬಿಡುವುದಕ್ಕಾಗುತ್ತದೆಯೇ ?

ಶ್ರೀ ಸಿ. ಬೈರೇಗೌಡ —ಪ್ರತಿಯೊಂದನ್ನೂ ತಪ್ಪಿಸುವುದಕ್ಕೆ ಕಾನೂನಿದೆ. ಮಾನ್ಯ ರಂಗನಾಥ್ ಅವರಿಗೆ ಆ ಆಲೋಚನೆ ಇತ್ತು. ಆದರೆ ಇವರು ಮಂತ್ರಿಗಳಾದಮೇಲೆ ಆ ರೀತಿಯಾದ ಕಾನೂನು ತರುವುದಕ್ಕೆ ಆಲೋಚನೆ ಮಾಡಿದ್ದಾರೆಯೇ ಇಲ್ಲವೆ ? ಕಾನೂನು ತರುವುದಾದರೆ ತಕ್ಷಣ ತಂದು ಮುಂದಿನ ಪರೀಕ್ಷೆ ಒಳಗಾದರೂ ವ್ಯವಸ್ಥಿತವಾದ ರೀತಿಯಲ್ಲಿ ಪರೀಕ್ಷೆ ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಸನ್ಮಾನ ಸಿದ್ಧಾ ಅವರು ಈಗಾಗಲೇ ಒಂದು ಸಲಹೆ ಕೊಟ್ಟಿದ್ದಾರೆ. ಕಳೆದ ಎರಡು ಮೂರು ವರ್ಷಗಳಿಂದ ಸತತವಾಗಿ ಪ್ರಶ್ನೆಪತ್ರಿಕೆ ಬಯಲಾಗಿವೆ. ಅದನ್ನು ಕಂಟ್ರೋಲ್ ಮಾಡಲಿಕ್ಕೆ ನಿಮ್ಮಿಂದಾಗಲಿಲ್ಲ. ಮಾನ್ಯ ಸಿದ್ಧ ಅವರು ಸಲಹೆ ಕೊಟ್ಟಂತೆ ನಾನೂ ಸಲಹೆ ಕೊಡುತ್ತೇನೆ. ನಿಮ್ಮ ಸರ್ಕಾರಕ್ಕೆ ಕಟ್ಟುನಿಟ್ಟಾಗಿ ಪ್ರಶ್ನೆ ಪತ್ರಿಕೆ ಬಯಲಾಗದಂತೆ ನೋಡಿಕೊಳ್ಳುವುದಕೆ ಸಾಧ್ಯವಿಲ್ಲ. ಅದು ನಮಗೆ ಖಾತ್ರಿಯಾಗಿದೆ. ರಾಜ್ಯದ ವಿದ್ಯಾರ್ಥಿಗಳಿಗೂ ಖಾತ್ರಿಯಾಗಿದೆ. ಆದ್ದರಿಂದ ಓಪನ್ ಆಗಿ ಪುಸ್ತಕಗಳನ್ನು ನೋಡಿಕೊಂಡು ಉತ್ತರ ಬರೆಯುವ ಹೊಸ ಪರೀಕ್ಷಾ ಪದ್ಧತಿಯನ್ನು ತರುವುದು ಒಂದೇ ಒಂದು ಮಾರ್ಗ ಇದೆ. ಇಲ್ಲದಿದ್ದರೆ ಅನಾವಶ್ಯಕವಾಗಿ ವಿದ್ಯಾರ್ಥಿಗಳು ಸಪರ್ ಆಗುತ್ತಾರೆ. ಸರ್ಕಾರದ ಬಿಗಿ ನಿಲುವು ಇಲ್ಲದಿದ್ದರೆ ಪರೀಕ್ಷಾ ಪದ್ಧತಿಯನ್ನೇ ಬದಲಾವಣೆ ಮಾಡಬೇಕು. ಹಾಗಿಲ್ಲದಿದ್ದರೆ ಹಗಲು ರಾತ್ರಿ ವಿದ್ಯಾಭ್ಯಾಸ ಮಾಡಿದವರೂ ಪರೀಕ್ಷೆಯಲ್ಲಿ ಬರೆದಿದ್ದಾರೆ, ಅಭ್ಯಾಸ ಮಾಡದೇ ಇರುವವರೂ ಬರೆದಿದ್ದಾರೆ. ಇದರಿಂದ ಮಕ್ಕಳ ಗತಿ ಏನು ?

ಪ್ರೊ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಮಂತ್ರಿಗಳು ಪ್ರಶ್ನೆ ಪತ್ರಿಕೆ ಪರೀಕ್ಷೆಗೆ ಮುಂಚೆ ಪ್ರಕಟಣೆಯಾಗುವುದನ್ನು ಮೂಲೋತ್ಪಾಟನೆ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೇವೆಂದು ಈಗತಾನೇ ಹೇಳಿದರು. ನಾನು ಹಲವಾರು ವರ್ಷಗಳು ಶಿಕ್ಷಕನಾಗಿ ಕೆಲಸ ಮಾಡಿದವನಾದುದರಿಂದ ಒಂದು ಮಾತನ್ನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಿಯವರೆಗೆ ನೀವು ಈಗ ಇರುವ ಪರೀಕ್ಷಾ ಪದ್ಧತಿಯನ್ನು ಮುಂದುವರಿಸುತ್ತೀರೋ ಅಲ್ಲಿಯವರೆಗೆ ಈ ಪಿಡುಗನ್ನು ನಿಲ್ಲಿಸುವುದಕ್ಕಾಗುವುದಿಲ್ಲ, ನಾವು ಪ್ರಶ್ನೆಗಳನ್ನು ಕೇಳುತ್ತಾ ಇರುವಂತಹ ರೀತಿ, ಮತ್ತೆ ನಾವು ಹೆಚ್ಚಿಗೆ ಬರವಣಿಗೆ ಪರೀಕ್ಷೆಯನ್ನು ಮಾಡುತ್ತಾ ಇರುವ ಒಂದು ಪದ್ಧತಿ. ಇದನ್ನು ನಾವು ಎಲ್ಲಿಯವರೆಗೆ ನಿಲ್ಲಿಸುವುದಿಲ್ಲ ಅಲ್ಲಿಯವರೆಗೆ ಮಾನ್ಯ ಸಿದ್ಧಾ ಅವರು ಏನು ಆರ್ಥದಲ್ಲಿ ಹೇಳಿದರು, ಓಪನ್ ಬುಕ್ ಎಕ್ಸಾಮ್ ಎಂದು. ಬೇರೆ ದೇಶದಲ್ಲಿ ಇರುವ ರೀತಿಯಲ್ಲಿ ಎಲ್ಲಿಯೂ ಪರೀಕ್ಷಾ ಪದ್ಧತಿಯನ್ನು ತರುವುದಕ್ಕೆ ಆಲೋಚನೆ ಮಾಡಿದರೆ ಈ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗೆ ಮುಂಚೆ ಹೊರಗೆ ಬರುವುದನ್ನು ನಿಲ್ಲಿಸಬಹುದು. ಹೊರದೇಶಗಳಲ್ಲಿ ಯಾವ ರೀತಿ ಇದೆಯೆಂದು ಮಾನ್ಯ ಅಧ್ಯಕ್ಷರಿಗೆ ಗೊತಿದೆ. There will be more of oral examinations than the written examinations. ನೀವು ಎಲ್ಲಿಯವರೆಗೆ ಆ ಪದ್ಧತಿಗೆ ಬರುವುದಿಲ್ಲ ಅಲ್ಲಿಯವರೆಗೆ ಓಪನ್ ಬುಕ್ ಪರೀಕ್ಷೆಗೂ ಬರುವುದಕ್ಕೆ ಸಾಧ್ಯವಿಲ್ಲ, ಪ್ರಶ್ನೆಗಳು ಲೀಕಾಟ್ ಆಗುವುದನ್ನು ನಿಲ್ಲಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ನೀವು ಮೂಲಭೂತವಾಗಿ ನಮ್ಮ ಪರೀಕ್ಷಾ ಪದ್ಧತಿಯನ್ನೇ ಬದಲಾವಣೆ ಮಾಡುವುದಕ್ಕೆ ಆಲೋಚನೆ ಮಾಡಬೇಕೇ ಹೊರತು, ಕೇವಲ ೩ ವರ್ಷಗಳಿಂದ ಇದು ಪ್ರಕಟವಾಗುತ್ತಿದೆ, ಹೋದವರ್ಷ ಇಂತಹ ಶಿಕ್ಷಕರನ್ನು ಅರೆಸ್ಟ್ ಮಾಡಿದೆವು, ಈ ವರ್ಷ ಇಂತಹವರನ್ನು ದಸ್ತಗಿರಿ ಮಾಡಿದೆವು, ಇಂತಹವರನ್ನು ನಾವು ದಸ್ತಗಿರಿ ಮಾಡುತ್ತೇವೆಂದರೆ ಈ ಪಿಡುಗು ನಿಲ್ಲುವುದಿಲ್ಲ. ಈ ಬಗ್ಗೆ ದಯವಾಡಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬೈರೇಗೌಡರು ಹೊಸ ಕಾನೂನಿನ ವಿಚಾರ ಹೇಳಿದ್ದಾರೆ. ಹಿಂದಿನ ವಿದ್ಯಾಮಂತ್ರಿಗಳು ಏನು ಕಾನೂನು ವಿಚಾರ ಮಾಡಿದ್ದರು ಎಂದು ಹೇಳಿದ್ದಾರೆ ಅದನ್ನು ವಿಚಾರ ಮಾಡುತ್ತೇವೆ, ಆದರೆ ಈಗ ಇರತಕ್ಕ ಬಿಕ್ಕಟನ್ನು ಹೋಗಲಾಡಿಸುವುದಕ್ಕೆ ಈಗಿನ ಕಾನೂನಿನಲ್ಲಿ ಏನು ಇದೆ ಅದನ್ನು ಎಷ್ಟು ಮಟ್ಟಿಗೆ ಉಪಯೋಗ ಮಾಡಬೇಕೋ ಅದನ್ನು ಮಾಡುತ್ತೇವೆ. ಮತ್ತು ಸರ್ಕಾರಕ್ಕೆ ಶಕ್ತಿ ಇದೆಯೋ ಇಲ್ಲವೋ ಎಂದು ನಾವು ಕೇಳಿರುತ್ತೇವೆ. ಸರ್ಕಾರಕ್ಕೆ ಶಕ್ತಿ ಇದೆ. ಆದರೆ ಯಾವ ವ್ಯವಸ್ಥೆಯಲ್ಲಿ ಶಕ್ತಿ ತೋರಿಸಬೇಕೋ ಅದನ್ನು ನಾವು

ತೋರಿಸುತ್ತೇವೆ. ಹೊಸ ಕಾನೂನನ್ನು ಬೇಕಾದರೆ ಹೊಸದಾಗಿ ತರೋಣ. ಆದರೆ ಇರುವ ಕಾನೂನಿನಲ್ಲಿ ಯಾವ ರೀತಿ ತಡೆಗಟ್ಟಬೇಕೋ ಅದನ್ನು ಮಾಡೋಣ. ಪರೀಕ್ಷಾ ಪದ್ಧತಿಯನ್ನು ಬದಲಾವಣೆ ಮಾಡುವ ವಿಚಾರ ಬಂದಿದೆ. ಅದನ್ನು ನಾವು ವಿಚಾರ ಮಾಡಬೇಕಾಗಿದೆ. ಈಗಿನ ಪರೀಕ್ಷಾ ಪದ್ಧತಿಯಲ್ಲಿ ಪ್ರತಿಭಾನ್ವೇಷಣೆ ಅಥವಾ ಪ್ರತಿಭೆಯ ಸರಿಯಾದ ಒಂದು ಮೌಲ್ಯಮಾಪನ ಆಗುತ್ತಿದೆಯೋ ಇಲ್ಲವೋ ಎನ್ನುವ ವಿಚಾರಗಳು ಈ ಸರ್ಕಾರದಲ್ಲಿ ಸಾಕಷ್ಟು ಆಗಿವೆ. ಶಿಕ್ಷಣ ತಜ್ಞರಲ್ಲೂ ಕೂಡ ಆಗಿದೆ. ಈ ವಿಚಾರಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಇದನ್ನು ವಿಚಾರ ಮಾಡುತ್ತೇವೆ.

ಅಧ್ಯಕ್ಷರು.—ಈಗ ಕಾಗದಪತ್ರಗಳ ಮಂಡನೆ,

ಟಾಡಾ ಕಾನೂನನ್ನು ಕೈ ಬಿಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್.—ಟಾಡಾ ಕಾನೂನನ್ನು ಅಮಲಿಗೆ ತಂದು ಭಯೋತ್ಪಾದನೆಯನ್ನು ನಿಗ್ರಹ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದನ್ನು ರಾಜ್ಯದಲ್ಲಿ ತರುವ ಅವಶ್ಯಕತೆ ಇದೆಯೇ ? ಅಂತಹ ಒಂದು ಭಯೋತ್ಪಾದನಾ ವಾತಾವರಣ ನಮ್ಮ ರಾಜ್ಯದಲ್ಲಿ ಇದೆಯೇ ? ನಮ್ಮ ರಾಜ್ಯಕ್ಕೆ ಈ ಶಾಸನ ಬೇಕೇ ?

ಅಧ್ಯಕ್ಷರು.—ಅದನ್ನು ನಂತರ ಚರ್ಚೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿರೋಧ ಪಕ್ಷದ ಎಲ್ಲಾ ಮುಖಂಡರೂ ಕೂಡ ಈ ಕಾನೂನು ಬೇಕಾಗಿಲ್ಲ ಎಂದಿದ್ದೇವೆ. ರೈತಸಂಘದ ಮುಖಂಡರೂ ಇದನ್ನು ಹೇಳಿದ್ದಾರೆ. ಈಗ ಶಾಂತಿ ಸುವ್ಯವಸ್ಥೆ ಕಾಪಾಡುವ ಬಗ್ಗೆ ಸರ್ಕಾರದಲ್ಲಿ ಅನೇಕ ರೀತಿಯ ಅಧಿಕಾರ ಇದೆ. ಐಪಿಸಿ ಇದೆ, ಆರ್ಮ್ಸ್ ಆಕ್ಟ್ ಇದೆ, ಸಿಆರ್‌ಪಿಸಿ ಇದೆ. ಕಾನೂನು ಚೌಕಟ್ಟಿನಲ್ಲಿ ಬೇಕಾದಷ್ಟು ಅಧಿಕಾರ ಇದೆ. ಆದ್ದರಿಂದ ರಾಜ್ಯದಲ್ಲಿ ಇಂತಹ ಒಂದು ಒಳ್ಳೆಯ ವಾತಾವರಣ ಇರುವಾಗ...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ಇದು ಆದ ತಕ್ಷಣ...

(ಗೊಂದಲ) ಆರ್ಡರ್... ಆರ್ಡರ್...

ಶ್ರೀ ವಾಟಾಳ್ ನಾಗರಾಜ್.—ಇದು ಒಂದು ಕರಾಳ ಶಾಸನವಾಗಬಹುದೆ. ಮಾನ್ಯ ಮುಖ್ಯ ಮಂತ್ರಿಗಳು ಏನು ತರಬೇಕೆಂದು ಹೇಳಿದ್ದಾರೆ ಇದನ್ನು ನಿಲ್ಲಿಸಿದರೆ ರಾಜ್ಯಕ್ಕೆ ಕ್ಷೇಮವೆಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾವುದೇ ಕಾನೂನನ್ನು ನೋಡಬೇ ತುರ್ತು ಪರಿಸ್ಥಿತಿಗೆ ಮಿರುವ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡಿದ್ದಾರೆ. ಪೋಲೀಸರ ದೌರ್ಜನ್ಯ ನಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇರುವ ಕಾನೂನು ಉಪಯೋಗ ಮಾಡಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹೊಣೆ ಮುಖ್ಯಮಂತ್ರಿಗಳದ್ದು. ವಿರೋಧಪಕ್ಷದ ಎಲ್ಲಾ ಮುಖಂಡರೂ ಸಲಹೆ ಕೊಟ್ಟಿದ್ದೇವೆ. ದಯವಮಾಡಿ ಟಾಡಾ ಕಾನೂನನ್ನು ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಮುನ್ಸೂಚನೆ ನೀಡಿದ್ದೀರಿ. ಟಾಡಾ ಕಾನೂನಿನ ಬಗ್ಗೆ ಕೆಲವೊಮ್ಮೆ ಭಿನ್ನವಾದ ಅಭಿಪ್ರಾಯಗಳು ಬರತಕ್ಕಂತಹ ಸಂದರ್ಭಗಳು ಕೂಡ ಇದೆ, ಇಲ್ಲವೆಂಬ ಮಾತನ್ನು ನಾನು ಅಲ್ಲಗೆಳೆಯುವುದಿಲ್ಲ. ಈಗ ನಾವು ಯಾವ ಪರಿಸ್ಥಿತಿಯಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆಂದು ವಿರೋಧ ಪಕ್ಷಗಳ ನಾಯಕರುಗಳ ಸಭೆಯನ್ನು ಕರೆದಾಗ ವಿವರಗಳನ್ನು ಕೂಡ ಕೊಟ್ಟಿವು ಹಾಗೂ ಶಾಸನ ಸಭೆಯಲ್ಲೂ ಕೂಡ ಕೊಡುತ್ತೇನೆಂಬ ಮಾತನ್ನು ಆ ದಿವಸವೇ ಹೇಳಿದ್ದೆ. ಆ ಮಾತನ್ನು ನಾನು ಇಂದು ಇಲ್ಲಿ ನೆನಪು ಮಾಡುತ್ತಿದ್ದೇನೆ. ಆದ್ದರಿಂದ ಆರ್ಜೆಂಟ್ ಆರ್ಜೆಂಟಾಗಿ ಪ್ರಸ್ತಾಪ ಮಾಡುವುದು ಬೇಡವೆಂಬುದು ನನ್ನ ಭಾವನೆ. ತಾವು ಟಾಡಾ ವಿಚಾರದಲ್ಲಿ ಎಷ್ಟು ವಿವರವಾಗಿ ಹೇಳುತ್ತೀರೋ ಅಷ್ಟೇ ವಿವರವಾಗಿ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಆರ್ಜೆಂಟ್ ಆರ್ಜೆಂಟಾಗಿ ಇದನ್ನು ಪ್ರಸ್ತಾಪ ಮಾಡುವುದು ಬೇಡ, ನಾನು ಆರ್ಜೆಂಟ್ ಆರ್ಜೆಂಟಾಗಿ ಉತ್ತರ ಕೊಡುವುದೂ ಕೂಡ ಬೇಡ, ಅದು ಸಾಧುವೂ ಕೂಡ ಅಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಆರ್ಜೆಂಟ್ ಆರ್ಜೆಂಟಾಗಿ ತಂದಿದ್ದೀರಿ ನಾವು ಆರ್ಜೆಂಟಾಗಿ ಪ್ರಸ್ತಾಪ ಮಾಡುತ್ತಿದ್ದೇವೆ.

(ಗೊಂದಲ)